

**ಸೋದರಿ ಸುಬ್ಬಲಕ್ಷ್ಮಿ**

ಪ್ರಕಾಶಕರು: ಪ್ರವ್ರಾಜಿಕ ಅಮಲಪ್ರಾಣಾ
ರಾಮಕೃಷ್ಣಾ ಶಾರದಾ ಮಿಷನ್
ದಕ್ಷಿಣೇಶ್ವರ, ಕೋಲ್ಕತ್ತಾ – ೭೦೦ ೦೭೬
ಪುಟ ಸಂಖ್ಯೆ: ೭೫.
ಬೆಲೆ: ರೂ: ೫/–




**ದಿವ್ಯತ್ರಯರ ಕಾವ್ಯಗಂಗೆ**

ರಚನೆ: ಎಂ.ಜಿ.ಗಂಗನಪಳ್ಳಿ
ಪ್ರಕಾಶಕರು: ಸ್ವಾಮಿ ಅಭಯಾನಂದ
ರಾಮಕೃಷ್ಣ ವಿವೇಕಾನಂದ ವೇದಾಂತಾಶ್ರಮ,
# ೧೨೬೭, ಹೆಚ್.ಐ.ಜಿ., ೧೨ನೇ
'ಬಿ' ಮುಖ್ಯ ರಸ್ತೆ, ಯಲಹಂಕ ಉಪನಗರ,
ಬೆಂಗಳೂರು – ೬೪.
ಪುಟ ಸಂಖ್ಯೆ: ೬೭.
ಬೆಲೆ: ರೂ. ೬೦/–

ದಿವ್ಯತ್ರಯರ ಜೀವನಚರಿತ್ರೆ ಹಾಗೂ ಉಪದೇಶಾಮೃತದ ಸುಮಾರು ೪೦ ವರ್ಷಗಳ ತೀವ್ರ ಅಧ್ಯಯನ ಫಲವಾಗಿ ಮೂಡಿಬಂದ ಕವಿತಾ ಸಂಕಲನದ ಸುಂದರ ಪುಷ್ಪಮಾಲೆಯೇ ಈ 'ದಿವ್ಯತ್ರಯರ ಕಾವ್ಯಗಂಗೆ.' ಮೈಸೂರಿನ 'ವಿವೇಕಪ್ರಭ', ಧಾರವಾಡದ 'ನವಚಿಂತನ' ಮುಂತಾದ ಪತ್ರಿಕೆಗಳಲ್ಲಿ ಆಗಾಗ್ಗೆ ಪ್ರಕಟಣೆಗೊಂಡು ಭಕ್ತರ, ಸಾಹಿತ್ಯಾಸಕ್ತರ ಪ್ರಶಂಸೆಗೆ ಪಾತ್ರವಾದ ಸುನೀತ (ಸಾನೆಟ್) ಗಳಿವು.

೬೭ ಪುಟಗಳ ಈ ಸುಂದರ ಪುಷ್ಪಮಾಲೆಯಲ್ಲಿ ೫೧ ಅಪರೂಪದ ದಿವ್ಯಪುಷ್ಪಗಳು ಸುಂದರವಾಗಿ, ಕಂಪನ್ನು ಬೀರುತ್ತಾ ಅರಳಿ ನಿಂತಿವೆ. 'ಲೋಕಗುರುವೆ ತವಪಾದಪದ್ಮಕ್ಕೆ ನಮನ' ಎನ್ನುತ್ತಾ ಶ್ರೀರಾಮಕೃಷ್ಣರಿಗೆ ಮೂರು ಸುನೀತಗಳನ್ನರ್ಪಿಸಿದ್ದಾರೆ. ಇನ್ನು 'ಶ್ರೀಮಾತೆ ತವಚರಣದಾಸೆಯೇ ಪೊರೆಯುವುದು...' ಎನ್ನುತ್ತಾ ಶ್ರೀಶಾರದಾದೇವಿಯವರಿಗೆ ಮೂರು ಸುನೀತಗಳನ್ನು ಅರ್ಪಿಸಿದ್ದಾರೆ. 'ಗುರುವೆಂದು ನಮಿಸಿ ಇವನ ಪಾದಕೆರಗಿತ್ತು ಜನ' ಮುಂತಾದ ಸ್ವಾಮಿ ವಿವೇಕಾನಂದರನ್ನು ಕುರಿತ ೪೫ ಸುನೀತಗಳು ಈ ಕೃತಿಯ ಹೆಚ್ಚಿನ ಪುಟಗಳನ್ನು ವ್ಯಾಪಿಸಿವೆ.

'ವಂಗನಾಡಿನ ತುಂಗ ಯೋಗಿಯೆ...', ಮೊದಲಾದ ಕವನಗಳಲ್ಲಿ ಕವಿಯ ಶೈಲಿ, ವಸ್ತುವಿನ ಆಯ್ಕೆಯ ಗುಣಮಟ್ಟಗಳ ಪರಿಚಯವಾಗುವುದು. ಒಟ್ಟಿನಲ್ಲಿ ಉತ್ತಮ ಕವಿಗಳ ಗುಂಪಿಗೆ ಸೇರುವ ಗಂಗನಪಳ್ಳಿಯವರು ಸರಳವಾಗಿ, ಸುಲಭವಾಗಿ, ಮುಂಜಾನೆಯ ಮಂಜಿನಂತೆ ಸದ್ದಿಲ್ಲದೆ ಓದುಗರ ಮನವನ್ನು ಅಪಹರಿಸುತ್ತಾರೆ. ಭಕ್ತರಿಗೆ, ಸಹೃದಯರಿಗೆ, ಸಾಹಿತ್ಯಾಭಿಮಾನಿಗಳಿಗೆ ಇದೊಂದು ರಸಾನುಭೂತಿಯೇ ಸರಿ. ಮನಸ್ಸಿಗೆ ಆನಂದ, ಬುದ್ಧಿಗೆ ಪ್ರಚೋದನೆ, ಹೃದಯಕ್ಕೆ ಭಾವಸ್ಫುರಣೆಯನ್ನು ತರುತ್ತದೆ ಈ ಕವನ ಸಂಕಲನ.

ಭಾರತೀಯ ನಾರಿಯ ಉಜ್ವಲ ಭವಿಷ್ಯ ಹೇಗಿರಬೇಕೆಂದು ವಾರಗಟ್ಟಲೆ, ತಿಂಗಳುಗಟ್ಟಲೆ ಚಿಂತಿಸುತ್ತಿದ್ದ ಸ್ವಾಮಿ ವಿವೇಕಾನಂದರ ಚಿಂತನೆಯ ಸಾಕಾರರೂಪವೇ 'ಸೋದರಿ ಸುಬ್ಬಲಕ್ಷ್ಮಿ'ಯ ಜೀವನಗಾಥೆ. ಪಾಶ್ಚಾತ್ಯ ಸ್ತ್ರೀಯರ ಸ್ವಾತಂತ್ರ್ಯ ಉತ್ಸಾಹ, ಕ್ರಿಯಾಶೀಲತೆಯೊಂದಿಗೆ ಭಾರತೀಯ ಸ್ತ್ರೀಯರ ನಿಯಮಬದ್ಧ ಪವಿತ್ರ ಸತ್‌ಶೀಲತೆಯ ಸಮ್ಮಿಳನವೇ ಸುಬ್ಬಲಕ್ಷ್ಮಿ. ವಿಧವೆಯರ ಗೋಳಾಟ, ತಿಕ್ಕಾಟಗಳಿಗೆ ಸವಾಲಾಗಿ ನಿಂತ ಸುಬ್ಬಲಕ್ಷ್ಮಿ ಸಮಾಜ ಸುಧಾರಕಳಲ್ಲ; ಆದರೆ ಸಮಾಜದಲ್ಲಿ ತಾನಾಗಿಯೇ ಮೊಳಕೆಯೊಡೆದಂತೆ ಯಾವುದೇ ಸದ್ದುಗದ್ದಲವಿಲ್ಲದೆ ಸುಧಾರಣೆ ಮೂಡಿಸಿ ಬಾಲ ವಿಧವೆಯರ ಪಾಲಿಗೆ ಸೋದರಿಯಾದಳು; ದಾರಿ ದೀಪವಾದಳು.

ಹಿಂದೂ ಬ್ರಾಹ್ಮಣರ ಸಂಪ್ರದಾಯಸ್ಥ ಕುಟುಂಬದಲ್ಲಿ ಜನಿಸಿ, ಹನ್ನೊಂದು ವರ್ಷಕ್ಕೇ ಗ್ರಹಸ್ಥಾಶ್ರಮಕ್ಕೆ ಕಾಲಿಟ್ಟ ಪುಟ್ಟ ಸುಬ್ಬಲಕ್ಷ್ಮಿಯು ಕೆಲವೇ ವಾರಗಳಲ್ಲಿ ಬಾಲವಿಧವೆಯರ ಗುಂಪಿಗೆ ಸೇರಿದಳು! ಆದರೂ ತಂದೆತಾಯಿಯರು, ವಿಶೇಷವಾಗಿ ತಂದೆಯವರು ಕುಟುಂಬ, ಸಮಾಜ ಎಲ್ಲವನ್ನೂ ಎದುರಿಸಿ, ಮಗಳಿಗೆ ಹೆಚ್ಚಿನ ವಿದ್ಯಾಭ್ಯಾಸ ಕೊಡಿಸಿ, ಅವಳ ಉಜ್ವಲ ಭವಿಷ್ಯಕ್ಕೆ ಕಾರಣೀಭೂತರಾದರು. ಇಪ್ಪತ್ತನೇ ಶತಮಾನದ ಆದಿಭಾಗದಲ್ಲಿ ಅಂಧಕಾರ ಆವರಿಸಿದ್ದ ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಯಲ್ಲಿ ಬಾಲವಿಧವೆ ಸುಬ್ಬಲಕ್ಷ್ಮಿ ಬಿ.ಎ.ಆನರ್ಸ್, ಎಲ್.ಎಲ್.ಬಿ ಪದವಿಗಳನ್ನು ಪಡೆದು ಮುಂದೆ ಶಿಕ್ಷಕಿ, ಲೇಖಕಿಯಾಗಿ ಮುಂದೆ 'ಶಾರದಾ ವಿದ್ಯಾಲಯ'ದ ಸಂಸ್ಥಾಪಕಳೂ ಆದಳು. ವಿಧಾನ ಪರಿಷತ್ತಿನ ಸದಸ್ಯೆಯಾಗಿ "ಪದ್ಮಶ್ರೀ" ಪ್ರಶಸ್ತಿಯ ಗೌರವಕ್ಕೆ ಪಾತ್ರಳಾದ ರೋಮಾಂಚನಕಾರಿ ಹೋರಾಟವನ್ನು ಸುಂದರವಾದ ಭಾಷೆ ಹಾಗೂ ಶೈಲಿಯಲ್ಲಿ ಈ ಸಣ್ಣ ಪುಸ್ತಕದಲ್ಲಿ ವರ್ಣಿಸಲಾಗಿದೆ. ೮೩ ವರ್ಷಗಳ ಅವಳ ಸುದೀರ್ಘ ಜೀವನಗಾಥೆಯನ್ನು ಹೊತ್ತ ಈ ಕಿರುಹೊತ್ತಿಗೆಯು ಓದುಗರನ್ನು ಭಾವಪರವಶರನ್ನಾಗಿಯೂ, ಕಾಲಾತೀತರನ್ನಾಗಿಯೂ ಮಾಡುವುದರಲ್ಲಿ ಸಂದೇಹವಿಲ್ಲ. ಹಿಂದಿನ ಯುಗದ ಆದರ್ಶ ಸೀತೆ, ಸಾವಿತ್ರಿ, ದಮಯಂತಿಯರಾದರೆ, ಇಂದಿನ ಯುಗದ ಆದರ್ಶಸ್ತ್ರೀಯರ ಗುಂಪಿಗೆ ಸೇರುತ್ತಾಳೆ ನಮ್ಮ ನೆಚ್ಚಿನ ಸೋದರಿ ಸುಬ್ಬಲಕ್ಷ್ಮಿ. ಕಾಲೇಜಿನ ಯುವತಿಯರು ಓದಲೇಬೇಕಾದ ಪುಸ್ತಕವಿದು.


*ಕೆ.ವಿ.ಸ್ವರ್ಣಗೌರಿ*

# ಮಣಿಕಂಠ


**ಕಥೆ : ಜಯಶ್ರೀ** **ಗ್ರಾಫಿಕ್ಸ್ : ಶಂಕರ್**

**1** ಅಯ್ಯಪ್ಪ ಸ್ವಾಮಿಯು ಶಿವ ಹಾಗೂ ವಿಷ್ಣುವಿನ ಅವತಾರವೆಂದು ಹೇಳುತ್ತಾರೆ. ಪಂಪಾನದಿಯ ದಡದಲ್ಲಿ ಒಂದು ಶಿಶುವಿನ ರೂಪದಲ್ಲಿ ಮಲಗಿದ್ದ ಅವನ ಕೊರಳಲ್ಲಿ ಥಳಥಳಿಸುವ ಒಂದು ಮಣಿಹಾರವಿತ್ತು.


**2** ಪಂದಳ ದೇಶದ ರಾಜನಾದ ರಾಜಶೇಖರನಿಗೆ ಮಕ್ಕಳಿರಲಿಲ್ಲ. ಅವನು ಕಾಡಿನಲ್ಲಿ ಬೇಟೆಯಾಡುತ್ತ ಬಂದವನು ಅಳುತ್ತಿರುವ ಮಗುವಿನ ಆಕ್ರಂದನವನ್ನು ಕೇಳಿಸಿಕೊಂಡ. ಅಷ್ಟರಲ್ಲಿ ಅಲ್ಲಿಗೆ ಒಬ್ಬ ಸಂನ್ಯಾಸಿ ಬಂದ.





**3** ತಮಗೆ ದೊರಕಿದ ಮಗುವಿನಿಂದಾಗಿ ರಾಜ, ರಾಣಿಯರು ಅತ್ಯಂತ ಆನಂದಗೊಂಡಿದ್ದರು. ಆದರೆ ಮಂತ್ರಿಗೆ ಇದರಿಂದ ಸಂತೋಷವಾಗಲಿಲ್ಲ.




**4** ಮಣಿಕಂಠನಿಗೆ ಐದು ವರ್ಷ ವಯಸ್ಸಾಯಿತು. ರಾಜ ಅವನನ್ನು ವಿದ್ಯಾಭ್ಯಾಸಕ್ಕಾಗಿ ಒಬ್ಬ ಗುರುವಿನ ಬಳಿಗೆ ಕಳುಹಿಸಿದನು. ವಿದ್ಯಾಭ್ಯಾಸ ಮುಗಿದ ನಂತರ ...



**5** ಮಣಿಕಂಠ ಒಂದು ಬಿಲ್ವದಳ ಹಾಗೂ ಒಂದು ತುಳಸೀದಳವನ್ನು ಹಾಲಿಗೆ ಹಾಕಿದ. ಮಂತ್ರವೊಂದನ್ನು ಪಠಿಸಿ, ಅದಕ್ಕೆ ಒಂದಿಷ್ಟು ಭಸ್ಮವನ್ನೂ ಹಾಕಿದ. ಅದನ್ನು ಗುರುಗಳ ಮಗನಿಗೆ ಕುಡಿಯಲು ಕೊಟ್ಟ. ಆಶ್ಚರ್ಯ! ಆ ಹುಡುಗನಿಗೆ ಕಣ್ಣು ಕಾಣಿಸಿತು, ಮಾತು ಬಂತು.





**6** ಮಣಿಕಂಠ ತನ್ನ ವಿದ್ಯಾಭ್ಯಾಸ ಮುಗಿಸಿ ಅರಮನೆಗೆ ಮರಳಿದ. ಕೆಲವು ವರ್ಷಗಳ ನಂತರ ರಾಣಿ ಒಂದು ಗಂಡುಮಗುವಿಗೆ ಜನ್ಮವಿತ್ತಳು. ಅವನಿಗೆ ರಾಜರಾಜ ಎಂದು ಹೆಸರಿಟ್ಟರು. ರಾಜ, ರಾಣಿಯರು ತಮ್ಮ ಇಬ್ಬರೂ ಮಕ್ಕಳನ್ನು ಕಣ್ಗೊಂಬೆಯಂತೆ ನೋಡಿಕೊಂಡರು.


**7** ಕ್ರಮೇಣ ರಾಜ ಮುದುಕನಾದ. ಅವನು ಮಣಿಕಂಠನಿಗೆ ಪಟ್ಟಾಭಿಷೇಕ ಮಾಡಲು ನಿರ್ಧರಿಸಿದ. ಈ ವಿಷಯ ಮಂತ್ರಿಗೆ ಗೊತ್ತಾಯಿತು.





**8** ಮಂತ್ರಿಯ ಸಲಹೆಯ ಪ್ರಕಾರ ರಾಣಿಯು ತನಗೆ ವಿಪರೀತ ತಲೆನೋವು ಆಗಿರುವಂತೆ ನಟಿಸಿದಳು. ರಾಜನಿಗೆ ಚಿಂತೆಯಾಯಿತು. ಹಲವು ಮಂದಿ ವೈದ್ಯರು ಅವಳಿಗೆ ಚಿಕಿತ್ಸೆ ಮಾಡಿದರು. ಆದರೆ ಪ್ರಯೋಜನವಾಗಲಿಲ್ಲ.



**9** ದುಷ್ಟಮಂತ್ರಿಯು ಒಬ್ಬ ನಕಲಿ ವೈದ್ಯನನ್ನು ಕರೆತಂದ.




**10** ಹುಲಿಯ ಹಾಲನ್ನು ತರಲು ಹಲವರು ಕಾಡಿಗೆ ಹೊರಟರು. ಆದರೆ ಯಾರಿಗೂ ಅದು ಸಾಧ್ಯವಾಗಲಿಲ್ಲ. ಅಷ್ಟರಲ್ಲಿ ಮಣಿಕಂಠ ರಾಜನ ಬಳಿಗೆ ಬಂದ.




**11** ರಾಜನಿಗೆ ಮಣಿಕಂಠನನ್ನು ಕಾಡಿಗೆ ಕಳುಹಿಸಿ ಕೊಡಲು ಮನಸ್ಸಿರಲಿಲ್ಲ.
ಏಕೆಂದರೆ ಅವನ ಮೇಲೆ ರಾಜನಿಗೆ ಅತ್ಯಂತ ಪ್ರೀತಿ. ಆದರೂ ಮಣಿಕಂಠ ಹಠ ಮಾಡಿದ್ದರಿಂದ ರಾಜ ಅದಕ್ಕೆ ಅರೆ ಮನಸ್ಸಿನಿಂದ ಒಪ್ಪಲೇಬೇಕಾಯಿತು.
ಮಣಿಕಂಠ ತಾಯಿಯಿಂದ ಬೀಳ್ಕೊಟ್ಟ. ಅವನನ್ನು ಕಳುಹಿಸಿಕೊಡಲು ತನಗೂ ಮನಸ್ಸಿಲ್ಲವೆಂಬಂತೆ ಅವಳು ನಟಿಸಿದಳು.




**12** ಮಹಿಷಿಯೆಂಬ ರಾಕ್ಷಸಿ ದೇವತೆಗಳಿಗೆಲ್ಲ ಹಲವು ಬಗೆಯಲ್ಲಿ ಉಪಟಳ ನೀಡುತ್ತಿದ್ದಳು. ಕಾಡಿನಲ್ಲಿ ದೇವತೆಗಳು ಮಣಿಕಂಠನ ಮುಂದೆ ಕಾಣಿಸಿಕೊಂಡು, ಅವನು ಜನ್ಮವೆತ್ತಿ ಬಂದುದರ ಉದ್ದೇಶವನ್ನು ನೆನಪಿಸಿದರು.

